## ಸಣ್ಣ ಮತ್ತು ಅತಿ ಸಣ್ಣ ರೈತರಿಗೆ
## ಒಂದೇ ಬಾರಿಗೆ ಸಾಲ ಚುಕ್ತಾ ವಿಶೇಷ ಯೋಜನೆ (ಓಟಿಎಸ್)

ಡಿಬಿಓಡಿ.ಸಂಖ್ಯೆ.ಬಿಪಿ.ಬಿಸಿ.40/21.05.004/2002–03 ನವೆಂಬರ್ 6, 2002
ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ
(ಆರ್‌ಆರ್‌ಬಿಗಳು ಮತ್ತು ಎಲ್‌ಎಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ಸಣ್ಣ ಮತ್ತು ಅತಿ ಸಣ್ಣ ರೈತರಿಗೆ**
**ಒಂದೇ ಬಾರಿಗೆ ಸಾಲ ಚುಕ್ತಾ ವಿಶೇಷ ಯೋಜನೆ (ಓಟಿಎಸ್)**

ನಮ್ಮ ಸುತ್ತೋಲೆ ಡಿಬಿಓಡಿ ಸಂಖ್ಯೆ ಬಿಪಿ.ಬಿಸಿ.80/21.04.117/2001–02 ದಿನಾಂಕ ಮಾರ್ಚ್ 22, 2002 ಇದನ್ನು ದಯವಿಟ್ಟು ನೋಡಿ. ಇದರಲ್ಲಿ ಸಾರ್ವಜನಿಕ ವಲಯ ಬ್ಯಾಂಕುಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡಿರುವ 50000/– ರೂಪಾಯಿಗಳವರೆಗಿನ ಸಾಲಗಳಿಗೆ ಒಂದೇ ಬಾರಿಗೆ ಸಾಲ ಚುಕ್ತಾ ವಿಶೇಷ ಯೋಜನೆಯ ಮಾರ್ಗಸೂಚಿಗಳನ್ನು ನಿರೂಪಿಸಲಾಗಿದೆ. ಅದರ ಪ್ಯಾರಾ 2(1) ಡಿ ಅನ್ವಯ, ಮಾರ್ಗಸೂಚಿಗಳು ಡಿಸೆಂಬರ್ 31, 2002 ರ ವರೆಗೆ ಮಾತ್ರ ಪ್ರವರ್ತನೆಯಲ್ಲಿರುತ್ತವೆ.

2. ಮಾರ್ಗಸೂಚಿಗಳ ಪ್ರವರ್ತನೆಯನ್ನು ವಿಸ್ತರಿಸುವುದಕ್ಕಾಗಿ ಬ್ಯಾಂಕುಗಳಿಂದ ಸರ್ಕಾರಕ್ಕೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿಗೆ ಮನವಿಗಳು ಬಂದಿವೆ. ಮೇಲಿನ ಅಂಶಗಳಿಂದಾಗಿ ಮತ್ತು ದೇಶದ ವಿವಿಧ ಭಾಗಗಳಲ್ಲಿರುವ ಬರ ಮತ್ತು ಪ್ರವಾಹ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಭಾರತ ಸರ್ಕಾರದೊಂದಿಗೆ ಸಮಾಲೋಚಿಸಿ, ಮಾರ್ಗಸೂಚಿಗಳ ಪ್ರವರ್ತನೆಯನ್ನು ಮತ್ತೆ 3 ತಿಂಗಳ ಅವಧಿಗೆ ಅಂದರೆ ಮಾರ್ಚ್ 31, 2003 ರವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ.

3. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

ಸಹಿ/–
(ಬಿ. ಮಹಾಪಾತ್ರ)
ಪ್ರಧಾನ ವ್ಯವಸ್ಥಾಪಕರು.